ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ `ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ - 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

**ಪ್ರಕಟಣೆ ಕೃಪೆಗಾಗಿ**

## ಕಾಲೇಜು ಜೀವನ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅಡಿಪಾಯ

## ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮದಲ್ಲಿ - ಶ್ರೀ ಶಿವಕುಮಾರ್

ಕೊಳ್ಳೇಗಾಲ: 27-09-2018 ಕಾಲೇಜು ಜೀವನ ವಿದ್ಯಾರ್ಥಿಗಳು ತಮ್ಮ ಸಮಗ್ರ ವ್ಯಕ್ತಿತ್ವ ವಿಕಸನ ಹೊಂದಲು ಉತ್ತಮ ಅಡಿಪಾಯ ಒದಗಿಸುವಂತಾಗಬೇಕು ಎಂದು ಶ್ರೀ ಎಸ್ ಶಿವಕುಮಾರ್, ಯುವಪರಿವರ್ತಕರು ಹಾಗೂ ಜೀವನ ಕೌಶಲ್ಯ ತರಬೇತಿದಾರರು, ಯುವ ಸ್ಪಂದನ ಕೇಂದ್ರ, ಚಾಮರಾಜನಗರ ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನ ಘಟಕದ ವತಿಯಿಂದ ಯುವ ಸ್ಪಂದನ ಜಿಲ್ಲಾ ಕಾರ್ಯಾಲಯ, ಚಾಮರಾಜನಗರ ಇವರ ಸಹಯೋಗದಲ್ಲಿ ಆಯೋಜಿಸಿದ್ದ "ವಿದ್ಯಾರ್ಥಿನಿಯರಿಗೆ ಜೀವನ ಕೌಶಲ್ಯ ತರಬೇತಿ" ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕಾಲೇಜು ಮೆಟ್ಟಿಲುಗಳನ್ನು ಹತ್ತುವ ತನಕ ಅಂಕಗಳು ಮಹತ್ವ ಪಾತ್ರ ವಹಿಸುತ್ತವೆ. ಆದರೆ ನಂತರ ಓದಿನ ಜೊತೆಗೆ ಭವಿಷ್ಯಕ್ಕೆ ನೆರವಾಗುವಂತಹ ಗುಣಗಳನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗುತ್ತದೆ. ಜೀವನ ಕೌಶಲ್ಯತೆಯನ್ನು ಸ್ವಪ್ರಯತ್ನದ ಮೂಲಕವೇ ಕಲಿಯಬೇಕಾಗುತ್ತದೆ. ಸಂವಹನ ಕೌಶಲ್ಯ, ನಾಯಕತ್ವ ಗುಣ, ಸಮಸ್ಯೆ ಪರಿಹರಿಸಿಕೊಳ್ಳುವ ಕೌಶಲ್ಯತೆ, ಆತ್ಮವಿಶ್ವಾಸ, ಒತ್ತಡ ನಿವಾರಿಸಿಕೊಳ್ಳುವ ಕೌಶಲ್ಯತೆ, ಸಮಯ ಪರಿಪಾಲನೆ ಇತ್ಯಾದಿ ಗುಣಗಳನ್ನು ಬೆಳೆಸಿಕೊಂಡಾಗ ಮಾತ್ರ ಸಮಗ್ರ ವ್ಯಕ್ತಿತ್ವ ವಿಕಸನ ಸಾಧ್ಯ. ಕಾಲೇಜು ಅವಧಿಯನ್ನು ಈ ದಿಶೆಯಲ್ಲಿ ಸರಿಯಾಗಿ ಬಳಸಿಕೊಂಡರೆ ಉಜ್ವಲ ಭವಿಷ್ಯ ಹೊಂದಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ ಉಮೇಶ ಇಂದಿನ ಪದವೀದರರು ವೃತ್ತಿಪರ ಕೌಶಲ್ಯಗಳ ಕೊರತೆಯಿಂದ ವಿದ್ಯಾರ್ಥಿಗಳಿದ್ದಾಗ ಇರುವ ಉತ್ಸಾಹ, ವಿಶ್ವಾಸ ಹೊಂದಿರುವುದಿಲ್ಲ. ಔದ್ಯೋಗಿಕ ಜೀವನಕ್ಕೆ ಬೇಕಾದ ಗುಣಗಳು ಅವರಲ್ಲಿರುವುದಿಲ್ಲ. ಕಾಲೇಜಿನಲ್ಲಿರುವಾಗ ಪ್ರತಿ ದಿನವೂ ಅಮೂಲ್ಯವಾದದ್ದು ಎಂಬುದನ್ನು ತಿಳಿದು ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದನ್ನು ಕಲಿಯಬೇಕು. ಇದರಲ್ಲಿ ಶಿಕ್ಷಕರ ಪಾತ್ರವೂ ಬಹುಮುಖ್ಯ. ವಿದ್ಯಾರ್ಥಿಗಳಲ್ಲಿ ಅಡಗಿರುವ ಗುಪ್ತ ಪ್ರತಿಭೆ ಕೌಶಲ್ಯ ಗುರುತಿಸಿ ಪ್ರೋತ್ಸಾಹಿಸಬೇಕು. ಪ್ರಾಯೋಗಿಕ ಶಿಕ್ಷಣ ಕಡೆಗೆ ವಿದ್ಯಾರ್ಥಿಗಳನ್ನು ಕೊಂಡೊಯ್ಯಬೇಕು ಎಂದು ತಿಳಿಸಿದರು.

ಇಂದಿನ ಕಾರ್ಯಾಗಾರದಲ್ಲಿ ಆಯ್ದ ಹತ್ತು ಜೀವನ ಕೌಶಲ್ಯ ಚಟುವಟಿಕೆಗಳ ಪೈಕಿ ಸಂವಹನ, ಸ್ವಯಂ ಜಾಗೃತಿ ಹಾಗೂ ಚಿಂತನಾಶಕ್ತಿಯಾದ ಮೂರು ಕೌಶಲ್ಯ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಭೂಗೋಳಶಾಸ್ತ್ರ ಪ್ರಾಧ್ಯಾಪಕಿ ಶ್ರೀಮತಿ ಸ್ಮಿತಾ, ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕ ಶ್ರೀ ಬಸವದತ್ತ ಮಹದೇವಪ್ರಸಾದ್, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಕೆ.ಆರ್ ಉಮಾದೇವಿ ಉಪಸ್ಥಿತರಿದ್ದರು.

ಶ್ರೀ ಎಸ್ ಶಿವಕುಮಾರ್ ಜೀವನ ಕೌಶಲ್ಯ ತರಬೇತಿದಾರರು ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಸ್ಮಿತಾ, ಪ್ರಾಚಾರ್ಯ ಪ್ರೊ ಉಮೇಶ ಹಾಗೂ ಶ್ರೀ ಬಸವದತ್ತಮಹದೇವಪ್ರಸಾದ್‌ರವರನ್ನು ಕಾಣಬಹುದು




ಜೀವನ ಕೌಶಲ್ಯ ತರಬೇತಿ ಕಾರ್ಯಗಾರದಲ್ಲಿ ಶ್ರೀ ಎಸ್ ಶಿವಕುಮಾರ್‌ರವರು ಚಿಂತನ ಶಕ್ತಿಯ ಬಗ್ಗೆ ತರಬೇತಿ ನೀಡುತ್ತಿರುವುದು.



ಜೀವನ ಕೌಶಲ್ಯ ತರಬೇತಿ ಕಾರ್ಯಾಗಾರದಲ್ಲಿ ಶ್ರೀಮತಿ ಸ್ಮಿತಾ ಸಂವಹನ ಕಲೆಯ ಬಗ್ಗೆ ತರಬೇತಿ ನೀಡುತ್ತಿರುವುದು.




ಕಾರ್ಯಗಾರದಲ್ಲಿ ಭಾಗವಹಿಸಿರುವ ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು

